ಗಮನ ಸೆಳೆಯುವ ಸೂಚನೆಗಳು

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರುಗಳು, ಟೆಕ್ನೀಷಿಯನ್‌ಗಳು ನರ್ಸ್‌ಗಳು, ಇನ್ನೀ ದರ್ಜೆ ನೌಕರರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

SRI SHAFI AHMED (Tumkur).—I call the attention of Minister for Health and Family Welfare to the hardship caused to public especially to the patients due to the non-filling of vacant posts of Doctors, Technicians, Nurses and Class-IV employees in the Hospitals of the State.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಆಪ್ಪಣೆ ಪಡೆದು ಈ ಹೇಳಿಕೆಯನ್ನು ಮಂಡಿಸುತ್ತೇನೆ.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ವೈದ್ಯರುಗಳನ್ನು ಭರ್ತಿ ಮಾಡುವ ಬಗ್ಗೆ ಲೋಕಸೇವಾ ಆಯೋಗವು ಅರ್ಜಿಗಳನ್ನು ಕರೆದಿದ್ದು, ೩೦-೧೦-೧೯೯೦ರ ಕೊನೆಯ ತಾರೀಖಾಗಿರುತ್ತದೆ. ಮತ್ತು ಸಂದರ್ಶನಗಳನ್ನು ದಿನಾಂಕ ೨೯-೧೧-೧೯೯೦ ರಿಂದ ೧೮-೧-೧೯೯೧ರ ವರೆಗೆ ನಡೆಸಲಾಗುತ್ತದೆ. ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಬಂದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರುಗಳ ೭ ಹುದ್ದೆಗಳಿಗೆ ಆರ್ಥಿಕ ನಿರ್ಬಂಧವನ್ನು ತೆಗೆದು ಹಾಕಲಾಗಿದ್ದು, ಇದರ ಬಗ್ಗೆ ನಿಯಮಾನುಸಾರ ಎಲ್ಲಾ ಆದೇಶಗಳನ್ನು ಅನುಸರಿಸಿ, ಸದರಿ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡಲಾಗುತ್ತದೆ.

ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳು ೨೪೨ ಖಾಲಿ ಇರುತ್ತವೆ. ಅವುಗಳಲ್ಲಿ ಶೇಕಡ ೨೦ರಷ್ಟು ಅಂದರೆ ೪೮ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ವನ್ನು ಕೈಗೊಳ್ಳಲಾಗಿದೆ. ಉಳಿದ ೧೯೪ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಸರ್ಕಾರವು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಹಾಗೇ ೨೪೨ ಹಿರಿಯ ಆರೋಗ್ಯ ಸಹಾಯಕರು ಮತ್ತು ೩೦೭ ಕಿರಿಯ ಆರೋಗ್ಯ ಸಹಾಯಕರು (ಪುರುಷರು) ಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುತ್ತದೆ. ಕಿರಿಯ ಆರೋಗ್ಯ ಸಹಾಯಕರು (ಮಹಿಳೆಯರು) ೪೭೬ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಈಗಾಗಲೇ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅವರು ಆದೇಶಗಳನ್ನು ಹೊರಡಿಸಿರುತ್ತಾರೆ.

೮೨ ನೇತ್ರ ಸಹಾಯಕರು, ೪೫೧ ಪ್ಯಾರಾ ಮೆಡಿಕಲ್ ವರ್ಕರ್ಸ್ ಹುದ್ದೆಗಳನ್ನು ಮತ್ತು ೪೨೪ ಶುಶ್ರೂಷಾ ದಾದಿಯರ (ಸ್ಟಾಫ್ ನರ್ಸ್) ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

೨,೫೦೦ ನಾಲ್ಕನೇ ದರ್ಜೆ ನೌಕರುಗಳ ನೇಮಕಾತಿ ಬಗ್ಗೆ ಆರ್ಥಿಕ ನಿಬಂಧನೆ ಆರ್ಡರನ್ನು ಸಡಿಲಿಸಿ ತುಂಬುವ ಕ್ರಮ ಸರ್ಕಾರವು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಷಫಿ ಅಹಮದ್.—ಕಳೆದ ಎಂಟು ವರ್ಷಗಳಿಂದ ಖಾಲಿ ಇರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಇವತ್ತು ನಮ್ಮ ಸ್ಟೇಟ್‌ನಲ್ಲಿರುವ ಹಾಸ್ಪಿಟಲ್ಸ್ ನೋಡಿದರೆ ಅಲ್ಲಿ ಕ್ಲಾಸ್ ಫೋರ್ ಎಂಪ್ಲಾಯೀಸ್ ಇಲ್ಲದೆ ಎಷ್ಟು ಅನಾನುಕೂಲ ವಾಗಿದೆ, ಸ್ಯಾನಿಟೇಷನ್‌ಗೆ ಎಷ್ಟರಮಟ್ಟಿಗೆ ತೊಂದರೆಯಾಗಿದೆ ಎಂಬುದು ತಮಗೆಲ್ಲಾ ಗೊತ್ತಾಗುತ್ತದೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಒಳ್ಳೊಳ್ಳೆಯ ಎಕ್ಯುಪ್‌ಮೆಂಟ್ಸ್ ಕೊಟ್ಟಿದ್ದೀರಿ. ಆದರೆ ೨೪೨ ಜೂನಿಯರ್ ಲ್ಯಾಬ್ ಟೆಕ್ನೀಷಿಯನ್ಸ್ ಹುದ್ದೆಗಳು ಖಾಲಿ ಇದ್ದು ಅದನ್ನು ಫಿಲಪ್ ಮಾಡುತ್ತೇವೆಂದು ಹೇಳಿದ್ದೀರಿ. ೨೫೦೦ ಗ್ರೂಪ್-ಡಿ ಎಂಪ್ಲಾಯೀಸ್‌ನ್ನು ಫಿಲಪ್ ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನೆಷ್ಟು ದಿವಸದಲ್ಲಿ ಫಿಲಪ್ ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮಗೆ ಹಣಕಾಸನ್ನು ಒದಗಿಸಿದ ಕೂಡಲೇ ಇಷ್ಟು ಹುದ್ದೆಗಳನ್ನೂ ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪಿ. ಎಸ್. ಸಿ. ಯಿಂದ ಯಾವಾಗ ಪಟ್ಟಿ ಕೊಡುತ್ತಾರೆ, ಆ ಕೂಡಲೇ ಡಾಕ್ಟರ್‌ಗಳನ್ನು ತುಂಬಿಸಿಕೊಡುವುದಕ್ಕೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಷಫಿ ಅಹಮಂದ್.—ಕಳೆದ ಎಂಟು ವರ್ಷಗಳಿಂದ ಇದೇ ರೀತಿ ನಡೆಯುತ್ತಿದೆ, ಪಾನ್ಯ ಸಚಿವೆಯವರು ಇದರ ಬಗ್ಗೆ ತೀವ್ರವಾಗಿ ಗಮನಿಸಿ ಆದಷ್ಟೂ ಬೇಗ, ಅತಿ ಶೀಘ್ರದಲ್ಲಿ ಭರ್ತಿ ಮಾಡಿದರೆ ಸೂಕ್ತ ಎಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಬಗ್ಗೆ ನಿಮಗಿಂತ ನಮಗೆ ಆಸೆ ಇದೆ. ಅತೀ ಶೀಘ್ರವಾಗಿ ಮಾಡಿಕೊಡುತ್ತೇನೆ.

(೨) ಗೋವಾ ಫೆನ್ನಿ ಕಳ್ಳಸಾಗಾಣಿಕೆಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಕಾಲ್ ಅಟೆನ್‌ಷನ್‌ನ್ನು ಪಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೆ. ಇದರಲ್ಲಿ ಗೃಹ ಇಲಾಖೆ, ಎಕ್ಸೈಸ್ ಇಲಾಖೆ ಎರಡೂ ಇನ್‌ವಾಲ್ವ್ ಆಗಿದೆ. ಇಲ್ಲಿ ಎಕ್ಸೈಜ್ ಇಲಾಖೆಯ ಅಧಿಕಾರಿಗಳ ಮೇಲೆ ಅಸಾಲ್ಟ್ ಆಗಿದೆ, it is due to the in action on the part of the Home Minister.

ಅಧ್ಯಕ್ಷರು.—ಅವರು ಏತಕ್ಕೆ ಅಸಾಲ್ಟ್ ಆಯಿತೆಂದು ಹೇಳುತ್ತಾರೆ. ಇವರು ಏನು ಮಾಡ ಬೇಕೆಂದು ಹೇಳುತ್ತಾರೆ.

SRI S. BANGARAPPA.—I have no objection.

SRI R. V. DESHAPANDE.—Any way the subject matter is the same. It is an important matter ಅಲ್ಲಿ ಒಂದು ಕೊಲೆ ಆಗಿದೆ. ೫೦ ಜನ ಇಂಜುರ್ ಆಗಿದ್ದಾರೆ. ೧೦ ಜನ ಎಕ್ಸೈಸ್ ಆಫಿಷಿಯಲ್ಸ್ ಇಂಜುರ್ ಆಗಿದ್ದಾರೆ.

MR. SPEAKER.—Fortunately the Chief Minister is also here.

SRI S. BANGARAPPA.—Before Hon. Member calls attention, what I feel is that there are two aspects. ಮೊದಲು ರೈಡ್ ವಗೈರೆ ವಿಚಾರ ಅಬಕಾರಿ ಸಚಿವರ ವ್ಯಾಪ್ತಿಗೆ ಬರುತ್ತದೆ. The matter has ended in scuffle resulting in the death of one or two persons who were working there. ಇದು ಹೋಮ್ ಮಿನಿಸ್ಟರ್ ಧರ್ಮಸಿಂಗ್‌ರವರ ವ್ಯಾಪ್ತಿಗೆ ಬರುತ್ತದೆ. ಆದುದರಿಂದ ಸಾಮಾನ್ಯವಾಗಿ ಅವರು ಯಾವ ವಿಚಾರ ಕೇಳುತ್ತಾರೆ ಎಂದು ಗೊತ್ತಾದರೆ ಅದಕ್ಕೆ ಪ್ರತ್ಯೇಕವಾಗಿ ಹೇಳಿಕೆ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. Are you interested in knowing something about the murder or some injuries that have been caused to some persons ? ಇದು ಸ್ವಲ್ಪ ವೇಗ ಆಗಿದೆ. ಆದ್ದರಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಗೋವಾ ಫೆನ್ನಿ ಕಳ್ಳಸಾಗಾಣಿಕೆಯಿಂದ ಉಂಟಾಗಿರುವ ಗಂಭೀರ ಪರಿಸ್ಥಿತಿ ಎಂದು ಇದೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಉತ್ತರ ಗೃಹ ಸಚಿವರು ಕೊಡುವುದು ಒಳ್ಳೆಯದು ಅಲ್ಲವೇ ?

MR. SPEAKER.—Do you direct your calling attention to the Home Minister or ...

SRI R.V. DESHPANDE.—To the Home Minister. A grave situation has arisen in North Kanara District particularly in Karwar and other places where arson and clashes have taken due to smuggling of Goa feni. Prohibitory order is also promulgated. The situation in this place is a matter of urgent public importance. Hence it should be taken up for discussion.

ಶ್ರೀ ಎಸ್. ಬಂಗಾರಪ್ಪ.—ಈಗ ನಾವು ಉತ್ತರವನ್ನು ಸಿದ್ಧ ಮಾಡಬೇಕಾಗುತ್ತದೆ. ನಾಳೆ ಅಥವಾ ನಾಳೆದ್ದು ಉತ್ತರ ಕೊಡುತ್ತೇವೆ.